ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU
CITY UNIVERSITY
Office of the Registrar (Evaluation), Central College Campus, Dr. AmbedkarVeedhi,
Bengaluru – 560 001. E-mail: registrarevlubcu@gmail.com, Ph.No.080-22295559

ಸಂಖ್ಯೆ: ಬಿ.ಸಿ.ಯು./ಪರೀಕ್ಷಾ ವಿಭಾಗ/01/2022-23/12559 ದಿನಾಂಕ 28.03.2023.

## ಸುತ್ತೋಲೆ

ಎಲ್ಲಾ ಪ್ರಾಂಶುಪಾಲರುಗಳಿಗೆ ಮತ್ತು ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ UUCMS Portal ನಿಂದ ಇನ್ನೂ ಹಲವಾರು ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲದೇ ಇರುವುದರಿಂದ, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದೇ ಇರಲು ಈ ಕೆಳಕಂಡ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಈ ನಿರ್ಧಾರಗಳನ್ನು ಅನುಸರಿಸಿ ಸಂಭಂದಪಟ್ಟ ಎಲ್ಲರೂ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುವು ಮಾಡಿಕೊಡಲು ಸೂಚಿಸಲಾಗಿದೆ.

01. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದು, ಹಾಲ್ ಟಿಕೆಟ್ ಪೋರ್ಟ್‌ಲ್‌ನಿಂದ ಬಂದಿಲ್ಲವಾದಲ್ಲಿ ಅದನ್ನು Manually generate ಮಾಡಿ ವಿದ್ಯಾರ್ಥಿಗಳಿಗೆ ಕೊಟ್ಟು, ಪರೀಕ್ಷೆಗೆ ಪ್ರವೇಶ ನೀಡತಕ್ಕದ್ದು, ಇದು ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
02. ಪರೀಕ್ಷಾ ಶುಲ್ಕವನ್ನು ಪಾವತಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಇದುವರೆಗೂ ಸರಿಯಾಗಿ ಲಭ್ಯವಾಗಿಲ್ಲದೇ ಇರುವುದರಿಂದ ಪ್ರಶ್ನೆ ಪತ್ರಿಕೆಗಳು ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಸರಬರಾಜಾಗಿರುವ ಸಾಧ್ಯತೆ ಇದ್ದು, ಅಂತಹ ಸಂದರ್ಭದಲ್ಲಿ ಪ್ರಾಂಶುಪಾಲರೆ ಖುದ್ದಾಗಿ ನಿಂತು ಕಡಿಮೆ ಬಂದಿರುವ ಪ್ರಶ್ನೆಪತ್ರಿಕೆಗಳ ಛಾಯಾಪ್ರತಿಯನ್ನು ತೆಗೆದು ವಿದ್ಯಾರ್ಥಿಗಳಿಗೆ ಹಂಚುವುದು ಈ ವಿಷಯದಲ್ಲಿ ಗೌಪ್ಯತೆ ಕಾಪಾಡುವುದು ಅತ್ಯಗತ್ಯ.
03. ವಿದ್ಯಾರ್ಥಿಗಳು ರಿಪೀಟರ್/ ರೆಗ್ಯುಲರ್/ ಲ್ಯಾಟರಲ್ entry ಮೂಲಕ ಪರೀಕ್ಷೆ ತೆಗೆದುಕೊಳ್ಳುತ್ತಿರುವವರು ಪರೀಕ್ಷಾ ಶುಲ್ಕ ಪಾವತಿಸಿದ್ದಲಿ ಮತ್ತು ಮಹಾವಿದ್ಯಾಲಯಗಳಲ್ಲಿ ಹಾಜರಾತಿ ಸರಿಯಿದ್ದಲ್ಲಿ manually admission ticket ಜನರೇಟ್ ಮಾಡಿಕೊಟ್ಟು ಪರೀಕ್ಷೆಗೆ ಅನುಮತಿಸುವುದು ನಂತರ ಇದನ್ನು ವಿಶ್ವವಿದ್ಯಾಲಯದಲ್ಲಿ ಸರಿಪಡಿಸಿಕೊಳ್ಳತಕ್ಕದು.
04. ಈಗಾಗಲೇ ಪುನರ್‌ಮೌಲ್ಯಮಾಪನದ ಫಲಿತಾಂಶ ಪ್ರಕಟವಾಗಿದ್ದು ಒಂದುವೇಳೆ ವಿದ್ಯಾರ್ಥಿಗಳು ಆ ಪೇಪರ್‌ಗಳಲ್ಲಿ ತೇರ್ಗಡೆಯಾಗಿದ್ದರೆ ಅವರುಗಳು ಪುನಃ ಪರೀಕ್ಷೆ ಬರೆಯುವ ಅಗತ್ಯ ಇರುವುದಿಲ್ಲ.
05. ಇನ್ನು ಯಾವುದೇ ಸಮಸ್ಯೆ ಎದುರಾದಲ್ಲಿ ನೇರವಾಗಿ ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿಯನ್ನು ಸಂಪರ್ಕಿಸುವುದು.
06. Manually generated Admission ticket ನಿಂದ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಎಲ್ಲ ಮಾಹಿತಿಯನ್ನು ಪ್ರತ್ಯೇಕವಾಗಿ ಮೌಲ್ಯಮಾಪನ ಕೇಂದ್ರಕ್ಕೆ ಸಲ್ಲಿಸುವುದು.

ತಮ್ಮ ವಿಶ್ವಾಸಿ

Lok a.6

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

**ಪ್ರತಿ:**

01. ಕಛೇರಿ ಪ್ರತಿ.